ದಯವಿಟ್ಟು ಸರ್ಕಾರದಿಂದ ಎಲ್ಲಿ ಮಕ್ಕಳು ಹೈಸ್ಕೂಲ್‌ನಲ್ಲಿ, ಮಿಡ್ಲ್ ಸ್ಕೂಲಿನಲ್ಲಿ ಮಕ್ಕಳು ಕಡಿಮೆ ಇದ್ದಾರೋ ಅದನ್ನು ಕಾಲೇಜಾಗಿ ಪರಿವರ್ತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಬಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಖಾಸಗಿ ಆಡಳಿತ ವ್ಯವಸ್ಥೆಗೆ ಒಳಪಟ್ಟಿದ್ದು ಒಂದು ಮಾತ್ರ ಇದೆ. ಇನ್ನು ಬಾಕಿ ಕಡೆಗಳಲ್ಲಿ ಹೆಚ್ಚಾಗಿ ಇಲ್ಲ ಎಂದು ಅವರು ಏನು ಕೇಳುತ್ತಿದ್ದಾರೆ ಇದನ್ನು ಪರಿಶೀಲನೆ ಮಾಡಿ ಅವಶ್ಯಕತೆ ಇದ್ದರೆ ಖಂಡಿತ ಮಾಡಿಕೊಡುತ್ತೇನೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಆದ ಅರಣ್ಯ ಉತ್ಪನ್ನ

281 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94 ಹಾಗೂ 1994-95ರ ಸಾಲುಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯದಿಂದ ಆದ ಉತ್ಪನ್ನವೆಷ್ಟು?

ಆ) ಅರಣ್ಯ ಬೆಳೆಸಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು ಹಾಗೂ ಈ ಕಾರ್ಯಕ್ರಮಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ)

	ವರ್ಷ	ಉತ್ಪನ್ನ:	ಆದಾಯ
1.	1993-94	ರೂ.	44.89 ಕೋಟಿ
2.	1994-95	ರೂ.	40.32 ಕೋಟಿ

ಆ) ಪಶ್ಚಿಮ ಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆಯಡಿಯಲ್ಲಿ ಬ್ರಿಟಿಷ ಸರ್ಕಾರ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ (ಓಡಿಎ) ನೆರವಿನೊಂದಿಗೆ 6 ವರ್ಷಗಳ ಅವಧಿಯಲ್ಲಿ 42,000 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಮಾದರಿಯ ನಡುತೋಪುಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯ ಒಟ್ಟು ಅಂದಾಜು ವೆಚ್ಚ ರೂ. 84.20 ಕೋಟಿ ಆಗಿರುತ್ತದೆ.

ಪ್ರಾದೇಶಿಕ ವಿಭಾಗಗಳ ಯೋಜನೆಯಡಿಯಲ್ಲಿ 1993 ಮತ್ತು 1994ರ ಮಳಗಾಲದಲ್ಲಿ 15,852 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪು ಬೆಳೆಸಲಾಗಿದೆ. 1995ನೇ ಮಳೆಗಾಲದಲ್ಲಿ ನೆಡುತೋಪು ಬೆಳೆಸಲು 7842 ಹೆಕ್ಟೇರ್ ಪ್ರದೇಶದಲ್ಲಿ 81 ಲಕ್ಷ ಸಸಿಗಳನ್ನು ಬೆಳೆಸಲಾಗಿರುತ್ತದೆ. ಈ ಯೋಜನೆಗಾಗಿ ಈವರೆವಿಗೆ 1870.52 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿರುತ್ತದೆ.

ಇದಲ್ಲದೆ ಸಾಮಾಜಿಕ ಅರಣ್ಯ ಯೋಜನೆಗಳಡಿಯಲ್ಲಿ 1993-94 ಮತ್ತು 94-95ನೇ ಸಾಲಿನಲ್ಲಿ ಕ್ರಮವಾಗಿ 1638 ಹೆಕ್ಟೇರ್ ಹಾಗೂ 1850 ಹೆಕ್ಟೇರ್ ನೆಡುತೋಪನ್ನು ಬೆಳೆಸಲಾಗಿದೆ. 1995ನೇ ಮಳೆಗಾಲದಲ್ಲಿ ನೆಡುತೋಪುಗಳನ್ನು ಬೆಳೆಸಲು 640 ಹೆಕ್ಟೇರ್ ಪ್ರದೇಶದಲ್ಲಿ 8 ಲಕ್ಷ ಸಸಿಗಳನ್ನು ಬೆಳೆಸಲಾಗಿರುತ್ತದೆ. ಈ ಉದ್ದೇಶಕ್ಕಾಗಿ ಜಿಲ್ಲಾ ಪಂಚಾಯತ್‌ನವರು ಕಳೆದ 3 ವರ್ಷಗಳಲ್ಲಿ ರೂ. 222.50 ಲಕ್ಷಗಳನ್ನು ಬಿಡುಗಡೆ ಮಾಡಿದ್ದು ಅದನ್ನು ಖರ್ಚು ಮಾಡಲಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇಕಡ 80ರಷ್ಟು ಅರಣ್ಯ ಭೂಮಿ ಇದೆ. ಕಳೆದ ಹತ್ತಾರು ವರ್ಷಗಳಿಂದ ಅರಣ್ಯ ಬೆಳೆಸುವುದಕ್ಕೋಸ್ಕರವಾಗಿ ಸರ್ಕಾರ ಸಾಕಷ್ಟು ಜಮೀನನ್ನು ತೆಗೆದುಕೊಂಡು ಅರಣ್ಯ

ಬೆಳೆಸುತ್ತಿದೆ. ಆದರೂ ನಾನು ಕೇಳಿದಂತೆ ಎರಡು ಮೂರು ವರ್ಷಗಳಲ್ಲಿ ಅರಣ್ಯ ಬೆಳೆಸತಕ್ಕಂಥಾದ್ದು ಸುಮಾರು 30 ಸಾವಿರ ಹೆಕ್ಟೇರ್‌ಗಳಷ್ಟು ಎಂದು ಇದೆ. ಸುಮಾರು 89 ಲಕ್ಷ ಸಸಿಗಳನ್ನು ನೆಡುವುದಕ್ಕೆ ಎಂದು ಇದೆ. ಈ ಸಸಿಗಳು ಬದುಕುವ ಪ್ರಮಾಣ ಎಷ್ಟು ಎಂದು ನಮಗೆ ಅನುಮಾನ ಶುರುವಾಗಿದೆ. ಅದು ಪ್ರಮಾಣ ಎಷ್ಟಿದೆ? ಏಕೆಂದರೆ 80 ಪರ್ಸೆಂಟ್ ಅರಣ್ಯ ಜಿಲ್ಲೆಯೇ ಇದೆ. ಇದರಲ್ಲಿ ಮತ್ತೆ ಮತ್ತೆ ಸಸಿಗಳನ್ನು ನೆಡುತ್ತಿರುವುದನ್ನು ನೋಡಿದರೆ ಸಸಿಗಳು ಬದುಕುತ್ತಿರುವ ಪ್ರಮಾಣ ಎಷ್ಟು ಎಂಬ ದೊಡ್ಡ ಪ್ರಶ್ನೆ ಇದೆ. ಇನ್ನೊಂದು ಈಗ ಅರಣ್ಯ ಉತ್ಪನ್ನಗಳಲ್ಲಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅವ್ಯವಹಾರ ನಡೆಯುತ್ತಿದೆ ಮತ್ತು ಕಳ್ಳಸಾಗಾಣಿಕೆ ನಡೆಯುತ್ತಿದೆ ಎಂಬ ವರದಿ ಇದೆ. ದೊಡ್ಡ ದೊಡ್ಡ ಪ್ರಮಾಣದ.....

ಅಧ್ಯಕ್ಷರು : ಭಾಷಣಕ್ಕೆ ಅವಕಾಶವಿಲ್ಲ. ಉಪ ಪ್ರಶ್ನೆ ಕೇಳಿ ತಾವು ಮೈಸೂರಿಗೆ ಬಂದಿದ್ದಿರಿ.

ಶ್ರೀ ವಿಶ್ವೇಶ್ವರ ಹೆಗಡೆ : ಅರಣ್ಯ ಉತ್ಪನ್ನೆಗಳನ್ನು ಹೆಚ್ಚಿಸುವುದಕ್ಕೆ ಬೇಕಾಗಿರತಕ್ಕಂತಹ ಯಾವುದಾದರೂ ಕ್ರಮಗಳನ್ನು ಕೈಗೊಂಡಿದ್ದೀರೋ ಹೇಗೆ? ಅಲ್ಲಿರುವ ಹೆಬ್ಬಾವುಗಳನ್ನು ಹಿಡಿಯಬೇಕಾಗಿದೆ.

ಶ್ರೀ ಹೆಚ್.ವೈ. ಮೇಟಿ : 81 ಲಕ್ಷ ಸಸಿಗಳನ್ನು ನಾವು ಬೆಳೆಸುತ್ತಿದ್ದೇವೆ ಮತ್ತು ಅಲ್ಲಿ ಮಳೆಗಾಲ ಜಾಸ್ತಿ ಇರುವುದರಿಂದ ಸಸಿಗಳು ಹೆಚ್ಚಿನ ಪ್ರಮಾಣದಲ್ಲಿ ಸಾಯುತ್ತಿಲ್ಲ. ಅಂದಾಜು 80 ಪರ್ಸೆಂಟ್‌ವರೆಗೆ ಸಹಿತ ಅಲ್ಲಿ ಬದುಕಲಿಕ್ಕೆ ಸರಿಯಾಗಿವೆ. ಇನ್ನು ಅರಣ್ಯಗಳ ಉತ್ಪನ್ನ ಹೆಚ್ಚು ಮಾಡಲಿಕ್ಕೆ ಈಗಾಗಲೇ ಅರಣ್ಯದಲ್ಲಿ ಹಸಿ ಮರ ಕಡಿಯುವುದು ತಡೆದಿದೆ. ಈಗ ಬಿದ್ದ ಮರ ಮತ್ತು ಸತ್ತ ಮರಗಳು ಇದರಿಂದ ಮಾತ್ರ ಉತ್ಪನ್ನ ಬರುತ್ತದೆ. ಎಷ್ಟು ಬರುತ್ತದೆ ಅಷ್ಟೆ, ನಾವು ಮತ್ತೆ ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಉರುವಲಿನಿಂದ ಬರತಕ್ಕಂಥಹುದು ಎಷ್ಟು ಇದೆ ಅಷ್ಟನ್ನು ನಾವು ಉತ್ಪನ್ನ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಹಸಿ ಮರ ಕಡಿಮೆ ಬಂದ ಸಲುವಾಗಿ ಹೆಚ್ಚಿಗೆ ಉತ್ಪನ್ನ ಮಾಡಲಿಕ್ಕೆ ಆಗುವುದಿಲ್ಲ.

ಡಾ॥ಯು. ಚಿತ್ತರಂಜನ್ : ಸನ್ಮಾನ್ಯ ಅಧ್ಯಕ್ಷರೇ, ಇವರ ಉತ್ತರದಲ್ಲಿ 1993-94ನೇ ಇಸವಿಯಲ್ಲಿ 44.89 ಕೋಟಿ, 1994-95ರಲ್ಲಿ 40.32 ಕೋಟಿ ಉತ್ಪನ್ನ ಬಂದಿದೆಯೆಂದು ಹೇಳಿದ್ದಾರೆ. ಈ ಹಸಿ ಮರಗಳನ್ನು ಕಡಿಯದೆ ಇರುವಂತೆ ನಿಲ್ಲಿಸಿದ್ದು ಯಾವಾಗ? ಸೀಸನ್ ಮತ್ತು ಟೀಕೆವುಡ್ ಇದರ ಬೆಲೆ ಎರಡು ಪಟ್ಟು ಹೆಚ್ಚಾಗಿದೆ. ಯಾರಾದರೂ ಇಲ್ಲಿ ಟೀಕ್‌ವುಡ್ ತೆಗೆದುಕೊಂಡವರು ಇದ್ದರೆ ಅಥವಾ ಎಲ್ಲರಿಗೂ ಗೊತ್ತಿರಬಹುದು. ಒಂದು ಸಾವಿರದ ಮುನ್ನೂರು ಇದ್ದುದು ಒಂದು ಸಾವಿರದ ನಾಲ್ಕುನೂರು ರೂಪಾಯಿವರೆಗೆ ನಡೆಯುತ್ತಿದೆ. ಒಂದು ವರ್ಷದಲ್ಲಿ ದ್ವಿಗುಣ ಬೆಲೆಯಾಗಿದೆ. ಅದೇ ನಮ್ಮ ಆದಾಯ ಎಷ್ಟು, ಸೀಸನ್‌ವುಡ್ ಮತ್ತು ಟೀಕ್‌ವುಡ್ ನಮ್ಮ ಜಿಲ್ಲೆಯಿಂದ ಹೋಗುತ್ತಿದೆ. ಅಂದರೆ ಅದಕ್ಕೆ ಇವತ್ತು ಅಂಕಿ ಸಂಖ್ಯೆಯೂ ಇಲ್ಲ. ಇದು 44 ಕೋಟಿಯಿಂದ 40 ಕೋಟಿಗೆ ಇಳಿದಿವೆ. ಇದಕ್ಕೆ ಬಹುಶಃ ಹಸಿ ಮರಗಳನ್ನು ಕಿಡುವುದು ನಿಲ್ಲಿಸಿದ್ದಾರೆ ಎನ್ನುವುದು ಒಂದೇ ಉತ್ತರ ನನಗೆ ಸಮಾಧಾನ ಕೊಡುತ್ತಿಲ್ಲ. ದಯವಿಟ್ಟು ಮಾನ್ಯ ಸಚಿವರು ಇದಕ್ಕೆ ಸ್ಪಷ್ಟೀಕರಣ ಕೊಡಬೇಕು. ಎರಡನೆಯದಾಗಿ, ಏನು ಈ ಮರಗಳನ್ನು ಸಸಿಗಳನ್ನು ಹಾಕುವಂಥಾದ್ದು ಒಂದು ಯೋಜನೆ ಇದೆ, ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಸಸಿಗಳನ್ನು ಹಾಕುವ ಯೋಜನೆಯಲ್ಲಿ ಮೂಲದಲ್ಲಿ ಹಣ ಕೊಡುವವರು ಮೂಲದಲ್ಲಿಯೇ ಬಡ್ಡಿ ಮುರಿದುಕೊಂಡು ಹಾಗೆ ಇವತ್ತು ನಮ್ಮ ಜಿಲ್ಲೆಯಲ್ಲಿ ಅರಣ್ಯ ಅಧಿಕಾರಿಗಳ ನಡುವೆ ಜಗಳ ಹತ್ತಿದೆ. 10 ಪರ್ಸೆಂಟ್ ಬದಲಿಗೆ ಈ ಅಧಿಕಾರಿ 15 ಪರ್ಸೆಂಟ್ ಕೇಳುತ್ತಿದ್ದಾನೆ. ಎಂಬುದು ನಿಮ್ಮ ಗಮನಕ್ಕೆ

ಬಂದಿದೆ ಇದರ ಬಗ್ಗೆ ಸಚಿವರ ಗಮನಕ್ಕೆ ಬಂದಿದೆಯೋ ಅಥವಾ ಇದಕ್ಕೆ ಏನು ಕ್ರಮ ಕೈಗೊಳ್ಳುತ್ತಿದ್ದಾರೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಹೆಚ್.ವೈ. ಮೇಟಿ : ಸಸಿಗಳ ಬಗ್ಗೆ ಉತ್ಪನ್ನ ಹೆಚ್ಚು ಮಾಡುವ ಸಲುವಾಗಿ 1994-95ರಲ್ಲಿ 40 ಕೋಟಿ ಏನು ಇದೆ ಅದು ಇನ್ನೂ ಹೆಚ್ಚಾಗಿದೆ. ಮಾರ್ಚ್ ಕೊನೆಯವರೆಗೆ ಅದು ಇನ್ನು ಬಂದಿಲ್ಲ, ಫೆಬ್ರವರಿ ಕೊನೆಯವು ಬಂದಿವೆ. ಈಗ ನಾವು ತೆಗೆಯಲಿಕ್ಕೆ ಹತ್ತಿದ್ದೇವೆ. ಅದು ಉತ್ಪನ್ನ ಈ ವರ್ಷ ಹೆಚ್ಚಾಗುತ್ತಿದೆ. ಉಳಿದ ಪ್ರಶ್ನೆ ಬೇರೆ ಪ್ರಶ್ನೆ ಕೇಳಿದರೆ ಗೊತ್ತಾಗುತ್ತದೆ.

ಅಧ್ಯಕ್ಷರು : ಕನ್ನಡ ವ್ಯತ್ಯಾಸವಾಗುತ್ತದೆ. ನೀವು ಉತ್ತರ ಕನ್ನಡ ಜಿಲ್ಲೆಯವರು, ಒಂದು ರೀತಿಯ ಕನ್ನಡ ಉಪಯೋಗ ಮಾಡುತ್ತಿದ್ದೀರಿ, ಅದು ಬಿಜಾಪುರದವರು ಬಾಂಬೆ ಕರ್ನಾಟಕದವರು ಆದ್ದರಿಂದ ಅವರು ಒಂದು ರೀತಿಯ ಕನ್ನಡ ಉಪಯೋಗ ಮಾಡುತ್ತಿದ್ದಾರೆ. ಇದರಿಂದ ನಿಮ್ಮ ಪ್ರಶ್ನೆ ಅಷ್ಟು ಸರಿಯಾಗಿ ಅವರಿಗೆ ಅರ್ಥವಾಗುತ್ತಿಲ್ಲ. ನಮ್ಮದು ಒಂದು ರೀತಿಯ ಕನ್ನಡ ಬಯಲು ಸೀಮೆಯಲ್ಲಿರುವುದರಿಂದ ಸಾಧ್ಯವಾದ ಮಟ್ಟಿಗೆ ನಾನು ಅರ್ಥ ಮಾಡಿಕೊಂಡ ಹಾಗೆ ನಿಮ್ಮ ಪ್ರಶ್ನೆಯನ್ನು ಅವರು ಅರ್ಥ ಮಾಡಿಕೊಂಡಿರುವ ಹಾಗಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ : ಮರದ ವಿಚಾರ ಅವರಿಗೆ ಗೊತ್ತಾಗುವುದಿಲ್ಲ, ಬಿಜಾಪುರ ಜಿಲ್ಲೆಯವರು ಕಾಡು ನೋಡಿಲ್ಲ, ಕಾಡಿನ ಮಂತ್ರಿಯಾಗಿದ್ದಾರೆ. ಹಾಗಾಗಿ ಕಾಡು ನೋಡದೆ ಇರುವವರು ಕಾಡಿನ ಮಂತ್ರಿಯಾದಾಗ ಅದು ಸ್ಪೆಸಿಫಿಕ್ಕಾದ ಪಾಯಿಂಟ್ ಹೇಗೆ ಗೊತ್ತಾಗುತ್ತದೆ.

ಅಧ್ಯಕ್ಷರು : ನೋಡಿ ಯಡಿಯೂರಪ್ಪನವರೇ ಮುಂದೆ ಬಿ.ಜೆ.ಪಿ. ಸರ್ಕಾರ ಬಂದರೆ ಮಲೆನಾಡಿನಹರನ್ನೇ ಅರಣ್ಯ ಮಂತ್ರಿಯನ್ನಾಗಿ ಮಾಡಿ. ಪ್ರಶ್ನೋತ್ತರ ಸಮಯ ವ್ಯರ್ಥವಾಗುವುದು ಬೇಡ. ದಯವಿಟ್ಟು ನೀವು ಪ್ರತ್ಯೇಕವಾಗಿ ಮಂತ್ರಿಗಳನ್ನು ಕಛೇರಿಯಲ್ಲಿ ಕಂಡು ನಿಮ್ಮ ಸಮಸ್ಯೆ ಏನಿದೆ ಈ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳಿ.

ಡಾ॥ ಎಂ.ಪಿ. ಕರ್ವಿ : ಓಡಿ.ಎಸ್ ಸ್ಕೀಮ್ ಏನು ಇದೆ ಅದು ಜನರನ್ನು ಅಫಾರ್‌ಸ್ಟೇಷನ್ ಸ್ಕೀಮ್‌ನಲ್ಲಿ ತೊಡಗಿಸಿಕೊಳ್ಳುವ ಯೋಜನೆ. ಅದು ಓಡಿ.ಎ ಈಸ್ಟ್, ಅದು ಅಲ್ಲಿಯ ಸ್ಥಳೀಯ ಜನರನ್ನು ಅಫಾರ್‌ಸ್ಟೇಷನ್ ಸ್ಕೀಮಿನಲ್ಲಿ ಡೈರೆಕ್ಟಾಗಿ ಇನ್‌ವಾಲ್ವ್ ಮಾಡುವ ಒಂದು ಯೋಜನೆ, ಆದರೆ ಈಗ ಇರತಕ್ಕಂಥಾದ್ದು ಬರೀ ಒಂದು ಹೆಸರಿಗೆ ಮಾತ್ರ ಕಮಿಟಿ ಮಾಡಿ ಫಾರೆಸ್ಟ್ ಇಲಾಖೆಯವರೇ ಸಸಿಗಳನ್ನು ನೆಡುವುದಕ್ಕೆ ಹತ್ತಿದ್ದಾರೆ. ಇದರಿಂದಾಗಿ ವ್ಯಾಪಕವಾದ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡುತ್ತದೆ. ಅದನ್ನು ತಪ್ಪಿಸಲಿಕ್ಕೆ ಈ ಪದ್ಧತಿಯನ್ನು ಸಚಿವರು ಪ್ರಾರಂಭಿಸಿ ಯಾವ ಉದ್ದೇಶಕ್ಕಾಗಿ ಈ ಸ್ಕೀಂ ಇದೆಯೋ ಅದರಂತೆ ನಡೆದುಕೊಳ್ಳುವುದಕ್ಕೆ ಸಿದ್ಧರಿದ್ದಾರೆಯೇ?

ಅಧ್ಯಕ್ಷರು : ಇವರ ಸಲಹೆಯನ್ನು ಪಡೆದುಕೊಂಡು ಆಡಳಿತ ನಡೆಸುವಂತೆ ಮಾಡಿ.

ಶ್ರೀ ಹೆಚ್.ವೈ. ಮೇಟಿ : ಸನ್ಮಾನ್ಯ ಅಧ್ಯಕ್ಷರೇ, ಓಡಿ.ಎ ಪ್ರಕಾರ ನಾವು ಈಗಾಗಲೇ 1993-94ರಲ್ಲಿ 53 ಗ್ರಾಮ ಸಮಿತಿಗಳಲ್ಲಿ ಮಾಡಿ 1994-95ರಲ್ಲಿ 76 ಗ್ರಾಮ ಸಮಿತಿಗಳನ್ನು ಮಾಡಿ ಮತ್ತೆ ಈ ಸಮಿತಿ ಮತ್ತು ಎಲ್ಲಾ ಅಧಿಕಾರಿಗಳು ಅಲ್ಲೆ ಏನೂ ಇಲ್ಲ. ಆರ್.ಎಫ್.ಓ ಒಬ್ಬರು ಮಾತ್ರ ಇರುತ್ತಾರೆ. ಹಾಗಾಗಿ ಅಧಿಕಾರಿಗಳು ಅಲ್ಲಿ ನಡೆಯುವುದಿಲ್ಲ. ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಪರಿಶೀಲಿಸಿ ವಿಚಾರಣೆ ಮಾಡುತ್ತೇನೆ.

ಡಾ॥ ಎಂ.ಪಿ. ಕರ್ಕಿ : ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಪರಿಶೀಲನೆ ಮಾಡಿ ತಮ್ಮ ಸಲಹೆಯನ್ನು ಗಮನಕ್ಕೆ ತೆಗೆದುಕೊಂಡು ಮಾಡುತ್ತಾರೆ. ವಾಟಾಳ್‌ರವರು ಹೊರಗಡೆ ಹೋಗಿದ್ದಾರೆಂದು ಕೊಂಡೆ, ಅವರು ಬಂದೇ ಬಿಟ್ಟರು.

ಶ್ರೀ ವಾಟಾಳ್ ನಾಗರಾಜ್ : ನೀವು ಇಲ್ಲಿ ಇರಬಾರದು ಎಂದು ಹೇಳಿದರೆ ಸುಲಭವಾಗಿ ಹೋಗುವುದಕ್ಕೆ ತಯಾರಾಗಿದ್ದೇನೆ.

ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು

337 - ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಧಾರವಾಡ ಜಿಲ್ಲಾ ಶಿಗ್ಗಾಂವ ಸವಣೂರ ತಾಲ್ಲೂಕುಗಳಲ್ಲಿ ಖಾಲಿ ಇರುವ ಪ್ರಾಥಮಿಕ ಶಿಕ್ಷಕರ ಹುದ್ದೆಗಳೆಷ್ಟು?

ಇ) ಇವುಗಳನ್ನು ಎಷ್ಟು ದಿವಸಗಳಲ್ಲಿ ತುಂಬಲಾಗುವುದು?

ಈ) ಒಂದು ತರಗತಿಗೆ ಒಬ್ಬ ಶಿಕ್ಷಕರಂತೆ ನೇಮಕಾತಿ ಮಾಡಿಕೊಂಡಲ್ಲಿ ರಾಜ್ಯದಲ್ಲಿ ಎಷ್ಟು ಶಿಕ್ಷಕರನ್ನು ನೇಮಕ ಮಾಡಬೇಕಾಗುತ್ತದೆ?

ಉ) ಸದರಿ ಶಿಕ್ಷಕರನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಅ) ದಿನಾಂಕ 31-3-95ರ ವರೆಗೆ ಉಂಟಾಗುವ ಖಾಲಿ ಹುದ್ದೆಗಳ ಸಂಖ್ಯೆ 13,170 (ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ತೋರಿಸಿದೆ).

ಆ) ಶಿಗ್ಗಾಂವ ತಾಲ್ಲೂಕಿನಲ್ಲಿ - 21

ಆ) ಸವಣೂರು ತಾಲ್ಲೂಕಿನಲ್ಲಿ - 21

ಇ) ಮುಂದಿನ ಶೈಕ್ಷಣಿಕ ವರ್ಷದಲ್ಲಿ ಭರ್ತಿ ಮಾಡಲಾಗುವುದು.

ಈ) 64,259 ಶಿಕ್ಷಕರನ್ನು ನೇಮಕ ಮಾಡಬೇಕಾಗುತ್ತದೆ.

ಉ) ಪ್ರತಿ ತರಗತಿಗೆ ಒಬ್ಬ ಶಿಕ್ಷಕ ಇರಬೇಕೆಂಬ ಸೂತ್ರವನ್ನು 2000ದ ಇಸವಿಯ ವೇಳೆಗೆ ಹಂತಹಂತವಾಗಿ ಗುರಿ ಮುಟ್ಟುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಪ್ರತಿ ವರ್ಷ 5,000 ಶಿಕ್ಷಕರ ಹುದ್ದೆಗಳನ್ನು ಸೃಜಿಸಲಾಗುತ್ತಿದೆ.

ಅನುಬಂಧ

ಜಿಲ್ಲಾವಾರು ಖಾಲಿ ಹುದ್ದೆಗಳ ವಿವರ

ಕ್ರ. ಸಂಖ್ಯೆ	ಜಿಲ್ಲೆಯ ಹೆಸರು		ಹುದ್ದೆಗಳ ಸಂಖ್ಯೆ
1.	ಬೆಂಗಳೂರು ಉತ್ತರ	:	59
2.	ಬೆಂಗಳೂರು ದಕ್ಷಿಣ	:	147
3.	ಬೆಂಗಳೂರು ಗ್ರಾಮಾಂತರ	:	735
4.	ತುಮಕೂರು	:	776
5.	ಕೋಲಾರ	:	351